ಕೇಳಿಕೆ: ಸಾಂಸ್ಕೃತಿಕ ನೋಟ

ಕೆ.ವಿ. ನೇತ್ರಾವತಿ

ಕುಂಬಾರಹಳ್ಳಿ ಗ್ರಾಮ, ಟಮಕ ಅಂಚೆ, ಕೋಲಾರ.

DOI: https://doi.org/10.5281/zenodo.18816663

ABSTRACT:

ಕೋಲಾರ–ಚಿಕ್ಕಬಳ್ಳಾಪುರ ಗಡಿಭಾಗದ ವಿಶಿಷ್ಟ ಜನಪದ ಕಲಾಪ್ರಕಾರವಾದ 'ಕೇಳಿಕೆ'ಯ ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಸಾಮಾಜಿಕ ಆಯಾಮಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಬಾಲ್ಯದ ರೋಚಕ ನೆನಪುಗಳ ಮೂಲಕ ಕೇಳಿಕೆಯ ತಾಲೀಮು, ವೇಷಭೂಷಣ, ಪ್ರದರ್ಶನ ಮತ್ತು ಊರಿನ ಜನರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಆಪ್ತವಾಗಿ ಕಟ್ಟಿಕೊಡಲಾಗಿದೆ. 'ಕೇಳಿಕೆ' ಪದದ ನಿಷ್ಪತ್ತಿ ಹಾಗೂ ಹಳಗನ್ನಡ ಕಾವ್ಯಗಳಲ್ಲಿ ಅದರ ಬಳಕೆಯನ್ನು ಉಲ್ಲೇಖಿಸಿ, ಇದು ಅಪ್ಪಟ ಕನ್ನಡ ಮೂಲದ ಕಲೆಯೆಂಬುದನ್ನು ಮಂಡಿಸಲಾಗಿದೆ. ಜೊತೆಗೆ, ಈ ರಂಗಭೂಮಿಯಲ್ಲಿ ಸ್ಥಳೀಯ ಮಹಿಳೆಯರ ಗೈರುಹಾಜರಿಯ ಹಿಂದಿರುವ ಪುರುಷಾಧಿಪತ್ಯದ ಧೋರಣೆಗಳನ್ನು ಸೂಕ್ಷ್ಮವಾಗಿ ಪ್ರಶ್ನಿಸಲಾಗಿದೆ. ಆಧುನಿಕ ಮಾಧ್ಯಮಗಳ ಪ್ರಭಾವದಿಂದ ಈ ಕಲೆ ನಶಿಸುತ್ತಿರುವ ಬಗೆಯನ್ನು ಚರ್ಚಿಸುತ್ತಲೇ, ಬದಲಾಗುತ್ತಿರುವ ಕಾಲಘಟ್ಟದಲ್ಲಿ ಕಲೆಯ ಹೊಸ ಸ್ವರೂಪಗಳನ್ನು ಆರೋಗ್ಯಕರವಾಗಿ ಸ್ವೀಕರಿಸಬೇಕಾದ ಅಗತ್ಯವನ್ನು ಪ್ರತಿಪಾದಿಸಲಾಗಿದೆ.

KEYWORDS:

ಕೇಳಿಕೆ, ಜನಪದ ರಂಗಭೂಮಿ, ಸಾಂಸ್ಕೃತಿಕ ನೆನಪುಗಳು, ಮಹಿಳಾ ಪ್ರಾತಿನಿಧ್ಯ, ಪಲ್ಲಟಗೊಳ್ಳುತ್ತಿರುವ ಕಲೆ.

ಕೇಳಿಕೆ ಎಂದ ತಕ್ಷಣ ನನ್ನ ಬಾಲ್ಯ, ನನ್ನ ಊರು (ಕೋಲಾರದಿಂದ ನಾಲ್ಕು ಕಿಲೋಮೀಟರ್ ದೂರದಲ್ಲಿರುವ ಕಾಮಧೇನುಹಳ್ಳಿಯಲ್ಲಿ), ಕೇಳಿಕೆ ಕಲಿಯುತ್ತಿದ್ದ ಭಜನೆ ಮನೆ, ಕೇಳಿಕೆ ಹಾಡುತ್ತಿದ್ದ ಬಸಪ್ಪನವರ ಹುಣಸೆ ಮರದ ಬಯಲು ಎಲ್ಲವೂ ಹಾಗೆಯೇ ಕಣ್ಣ ಮುಂದೆ ಹರಿದಂತಾಗುತ್ತದೆ, ಅವೆಲ್ಲವೂ ಖುಷಿಯಿಂದ ನನ್ನೊಡನೆ ಕುಣಿಯುತ್ತವೆ, ನಾನು ಕೂಡ ಅವುಗಳೊಂದಿಗೆ ಕುಣಿಯುತ್ತಿದ್ದೇನೇನೋ ಅನಿಸುತ್ತದೆ. ಊರಲ್ಲಿ ಕೇಳಿಕೆ ಆಡಬೇಕೆಂದು ದೊಡ್ಡವರೆಲ್ಲ ಸೇರಿ ಮಾತನಾಡಿಕೊಳ್ಳುವಾಗ, ಊರಿನ ಗಂಡಸರೆಲ್ಲಾ ಸೇರಿ ಭಜನೆ ಮನೆ ಹತ್ತಿರ ಮಾತನಾಡಿಕೊಳ್ಳುವಾಗ ಒಬ್ಬರಿಂದ ಒಬ್ಬರಿಗೆ ಹರಡಿ ಇಡೀ ಊರಿಗೆ ತಿಳಿದು ಬಿಡುತ್ತಿತ್ತು. ಇನ್ನು ನಮಗೆ ತಿಳಿಯದೆ ಇರುತ್ತದೆಯೇ, ನಾವು ಆಗ ಚಿಕ್ಕವರು, ನಮ್ಮೂರಲ್ಲಿ ಕೇಳಿಕೆ ಆಡುತ್ತಾರಂತಪ್ಪೋ ಎಂದು ಹಾಡುತ್ತಿದ್ದೆವು, ತಿರುಗುತ್ತಿದ್ದೆವು, ಕಿರುಚುತ್ತಿದ್ದೆವು. ಕಲಿಯುವ ಹತ್ತಿರ ನಾವು ಹೋಗಿ ಕೇಳಿಕೆ ಆಡುವುದನ್ನು ನೋಡಬಹುದು ಎಂಬ ಖುಷಿ ನಮ್ಮದಾಗಿತ್ತು. ರೂಢಿಯಂತೆ

ಮೊದಲಿನಿಂದಲೂ ಕೇಳಿಕೆ ಆಡುತ್ತಿದ್ದ ಗಂಡಸರೆಲ್ಲಾ ಸೇರಿ ಯಾವ ಕೇಳಿಕೆ ಆಡಬೇಕು ಅಂತ ಮಾತನಾಡುತ್ತಿದ್ದರು. ಇಂತಹ ಕೇಳಿಕೆ ಮಾಡುವುದೆಂದು ನಿರ್ಧರಿಸುತ್ತಿದ್ದರು. ನಮ್ಮ ಊರಿನಲ್ಲಿ ಕೇಳಿಕೆಯನ್ನು ಕನ್ನಡ ಮತ್ತು ತೆಲುಗು ಎರಡೂ ಭಾಷೆಗಳಲ್ಲಿ ಆಡುತ್ತಿದ್ದರು. ಕುರುಕ್ಷೇತ್ರ, ಭಕ್ತ ಪ್ರಹ್ಲಾದ, ಕೃಷ್ಣಾರ್ಜುನ ಯುದ್ಧ, ಬಾಲನಾಗಮ್ಮ, ಸಾಸಲೂರು ಚಿನ್ನಮ್ಮ ಹೀಗೆ ಅನೇಕ ತರಹದ ಕೇಳಿಕೆಗಳನ್ನು ಆಡುತ್ತಿದ್ದರು. ಹೊರಗಿನಿಂದ ಕರೆಸಿದ ಕೆಲವು ಅಲೆಮಾರಿ ಸಮುದಾಯಗಳು ತೆಲುಗಿನಲ್ಲಿ ಕೇಳಿಕೆಯನ್ನು ಆಡಿದರೆ, ನಮ್ಮೂರಿನಲ್ಲೇ ಇರುವ ಗಂಡಸರು ಸೇರಿ ಕನ್ನಡದಲ್ಲಿ ಕೇಳಿಕೆಯನ್ನು ಮಾಡುತ್ತಿದ್ದರು. ಅಲೆಮಾರಿಗಳದು ಕೇಳಿಕೆ ಆಡುವುದು ವೃತ್ತಿಯಾಗಿತ್ತು. ನಮ್ಮ ಊರಿನ ಗಂಡಸರದು ಹವ್ಯಾಸವಾಗಿತ್ತು. ಚೆನ್ನಾಗಿ ಓದಿಕೊಂಡವರು ಕೂಡ ಈ ಕೇಳಿಕೆಯಲ್ಲಿ ಪಾರ್ಟು ಮಾಡುತ್ತಿದ್ದರು. ಕೇಳಿಕೆಯನ್ನು ಯಾವಾಗ ಕಲಿತು ಮುಗಿಸುತ್ತಾರೆ, ಮಾಡುತ್ತಾರೋ ಎಂಬ ಕಾತುರ ನಮ್ಮದಾಗಿತ್ತು. ಯಾಕೆಂದರೆ ಝಗಮಗಿಸುವ ಬೆಳಕು, ಲೈಟುಗಳು, ತರಾವರಿ ತರಾವರಿ ಬಣ್ಣದ ಬಟ್ಟೆಗಳು ನೋಡುವುದು ನಮಗೆ ಖುಷಿಕೊಡುತ್ತಿತ್ತು. ಕೇಳಿಕೆ ಶುರುವಾಗುವ ಮೊದಲು ಹಾಕುತ್ತಿದ್ದ ಕನ್ನಡ ಮತ್ತು ತೆಲುಗು ಸಿನಿಮಾದ ಹಾಡುಗಳಿಗೆ ನಮ್ಮ ಡ್ಯಾನ್ಸ್ ಹೇಗೆ ಮಾಡಬೇಕೆಂಬ ನಮ್ಮ ತಯಾರಿ ಜೋರಾಗಿ ನಡೆದಿರುತ್ತಿತ್ತು.

ಕೇಳಿಕೆ ಇನ್ನೂ 4–5 ತಿಂಗಳಿಗೆ ಆಡುತ್ತಾರೆ ಎನ್ನುವಾಗ ಈಗಿನಿಂದಲೇ ಕೇಳಿಕೆ ಕಲಿಯಲು ಪ್ರಾರಂಭಿಸುತ್ತಿದ್ದರು. ಊರು ಮುಂದೆ ಇರುವ ಭಜನೆ ಮನೆಯಲ್ಲಿ ತಾಲೀಮು ಶುರುವಾಗುತ್ತಿತ್ತು. ನಾಟಕ ಕಲಿಸಲು ಪಕ್ಕದ ಊರಿನ ಮಾರ್ಜನಹಳ್ಳಿಯಿಂದ ನಾಟಕದ ಮೇಷ್ಟ್ರು ಬರುತ್ತಿದ್ದರು. ಅವರು ಬಿಳಿ ಪಂಚೆ ಬಿಳಿ ಶರ್ಟು ಹಾಕಿಕೊಂಡು ಉದ್ದ ಕೂದಲನ್ನು ಹಿಂದಕ್ಕೆ ಬಾಚಿ ಗಂಟು ಹಾಕಿರುತ್ತಿದ್ದರು. ಅವರಿಗೆ ಕೇಳಿಕೆ ಹಾಡುತ್ತಾ ಕಲಿಯುತ್ತಿರುವವರೆಲ್ಲ ತುಂಬಾ ಗೌರವ ಕೊಡುತ್ತಿದ್ದರು. ಅವರು ಹೇಳಿದ್ದನ್ನು ಚಾಚು ತಪ್ಪದೆ ಮಾಡುತ್ತಿದ್ದರು. ಅವರು ಬೈದರೆ ಬೈಸಿಕೊಳ್ಳುತ್ತಿದ್ದರು. ರಾತ್ರಿ ಊಟ ಆದ ನಂತರ ಎಂಟಕ್ಕೆ ಭಜನೆ ಮನೆಯಲ್ಲಿ ಕೇಳಿಕೆಯ ತಾಲೀಮು ಶುರುವಾಗುತ್ತಿತ್ತು. ರಾತ್ರಿ ಮುಗಿಯುತ್ತಿದ್ದು 11 ಗಂಟೆಗೆ. ನಾವು ಕೇಳಿಕೆ ಕಲಿಯುವುದನ್ನು ನೋಡಲು ಹೋಗುತ್ತಿದ್ದೆವು. ಆಗ ನಮಗೆ ಅಷ್ಟೊಂದು ಏನೂ ಅರ್ಥವಾಗುತ್ತಿರಲಿಲ್ಲ, ಆದರೂ ತುಂಬಾ ಕುತೂಹಲದಿಂದ, ಖುಷಿಯಿಂದ ಕೇಳಿಸಿಕೊಂಡು ಅವರು ಹಾಡುಗಳು ಹೇಳಿದಾಗ ಕುಣಿಯುತ್ತಿದ್ದೆವು. ನಮ್ಮ ಗಲಾಟೆ ಸ್ವಲ್ಪ ಜೋರಾದಾಗ ನಮ್ಮನ್ನು ಅಲ್ಲಿಂದ ಓಡಿಸುತ್ತಿದ್ದರು. ನಾವು ಬಾರದೆ ಬಲವಂತದಿಂದ ಅಲ್ಲಿಯೇ ಕೂತುಕೊಂಡು ನೋಡುತ್ತಿದ್ದಾಗ ಹೊಡೆಯಲು ಬರುತ್ತಿದ್ದರು. ಅವರಿಗೆ ಸಿಕ್ಕಿದರೆ ಓಡಿ ಹೋಗುತ್ತಿದ್ದೆವು. 'ಎಲೆ ನಾರಿ ನಾರಿ ಮುನಿಯದಿರು ವಯ್ಯಾರಿ' ಭೀಮ ದ್ರೌಪದಿಗೆ ಹೇಳುವ ಹಾಡಿನ ರೂಪದ ಮಾತುಗಳು ನಮಗೆ ಬಾಯಿಪಾಠವಾಗಿದ್ದವು. ಬಳಾರೆ ಬಲೆ ಬಲೆ ಬಳಾರೆ ಬಲೆ ಬಲೆ ಹಾಡಿನ ಹಿಂದೆ ಬರುವ ಕೋರಸ್ ಗಳು ನಮ್ಮನ್ನು ಆಗ ತುಂಬಾ ಆಕರ್ಷಿಸುತ್ತಿದ್ದವು. ಕೇಳಿಕೆಯ ಮೇಷ್ಟ್ರು ಸಣ್ಣ ಪುಸ್ತಕದಲ್ಲಿ ಕೇಳಿಕೆ ಕಲಿಯುವವರಿಗೆ ಅವರವರ ಡಯಲಾಗ್ ಗಳನ್ನು ಬರೆದುಕೊಡುತ್ತಿದ್ದರು. ನಾವು

ನಮ್ಮ ಶಾಲೆಯಲ್ಲಿ ಪದ್ಯಗಳನ್ನು ಬಾಯಿಪಾಠ ಮಾಡಿ ಮೇಷ್ಟ್ರಿಗೆ ಒಪ್ಪಿಸುವ ಹಾಗೆ ಅವರು ಸಹ ತಮ್ಮ ಕೇಳಿಕೆಯ ಡಯಲಾಗ್ ಅನ್ನು ಬಾಯಿಪಾಠ ಮಾಡಿ ನಾಟಕದ ಮೇಸ್ತ್ರಿಗೆ ಒಪ್ಪಿಸುತ್ತಿದ್ದರು. ಸಂಭಾಷಣೆಯ ಜೊತೆಗೆ ಹೆಚ್ಚು ಹಾಡುಗಳು ಸಹ ಇರುತ್ತಿದ್ದವು. ಸಂಗೀತ ಬರದವರು ಕೂಡ ಹಾರ್ಮೋನಿಯಂಗೆ ತಕ್ಕಂತೆ, ತಬಲದ ತಾಳಕ್ಕೆ ತಕ್ಕಂತೆ ಹಾಡಲು ಕಲಿಯುತ್ತಿದ್ದರು. ಕೆಲವು ಹಾಡುಗಳನ್ನು ಕೇಳಿಕೆ ಮೇಷ್ಟ್ರು ಹಾಡುತ್ತಿದ್ದರೆ ಅದಕ್ಕೆ ತಕ್ಕ ಹಾಗೆ ಪಾತ್ರಧಾರಿಗಳು ಅಭಿನಯಿಸುತ್ತಿದ್ದರು. ಈಗಲೂ ಕೂಡ ಕೇಳಿಕೆ ಹೇಳಿಕೊಡುವ ಕೇಳಿಕೆ ಮೇಷ್ಟ್ರುಗಳಿದ್ದಾರೆ. ಕೇಳಿಕೆಯನ್ನು ಕಲಿಯುತ್ತಿದ್ದ ದೊಡ್ಡಪ್ಪನವರ ಗೂಳಪ್ಪ ಹಸುಗಳಿಗೆ ಹುಲ್ಲು ತರುತ್ತಲೇ ಕೇಳಿಕೆಯ ಸಾಲುಗಳನ್ನು ಅಭ್ಯಾಸ ಮಾಡುತ್ತಿದ್ದರು. ಸೋಮಪ್ಪ ಹಸುಗಳಿಗೆ ಹಾಲು ಕರೆಯುತ್ತಾ ಅಭ್ಯಾಸ ಮಾಡುತ್ತಿದ್ದರು. ಮೇಕೆ ಮೇಯಿಸುವ ಲಕ್ಷ್ಮಣ ಮೇಕೆ ಮೇಯಿಸಲು ಹೋದಾಗ ಜೋರು ಜೋರಾಗಿ ಕೇಳಿಕೆಯ ಹಾಡುಗಳನ್ನು ಬಾಯಿಪಾಠ ಮಾಡುತ್ತಿದ್ದರು. ನಾವು ಇವರೆಲ್ಲರನ್ನು ನೋಡಿ ನಾವು ಕೂಡ ಅವರ ತರದಲ್ಲಿ ಬಾಯಿಪಾಠ ಮಾಡಲು ಪ್ರಯತ್ನಿಸುತ್ತಿದ್ದೆವು. ನಮ್ಮ ಆಟವೂ ಕೂಡ ಅಂದಿನ ದಿನಗಳಲ್ಲಿ ಅದೇ ಆಗಿತ್ತು, ಕೆಲವು ಮಕ್ಕಳು ಕೇಳಿಕೆ ಆಡಿದರೆ ಇನ್ನು ಕೆಲವು ಮಕ್ಕಳು ಮುಂದೆ ಕುಳಿತುಕೊಂಡು ನೋಡುವುದು ಆಗ ಅದೇ ನಮ್ಮ ಆಟವಾಗಿತ್ತು.

ಕೇಳಿಕೆ ಆಡುವ ದಿನ ಹತ್ತಿರ ಬಂದ ಹಾಗೆಲ್ಲಾ ಕೇಳಿಕೆ ಪಾತ್ರ ಮಾಡುವವರಿಂದ, ಊರಿನ ಜನರಿಂದ, ಇತರ ದಾನಿಗಳಿಂದ ಹಣ ಸಂಗ್ರಹಿಸಿ ಕೇಳಿಕೆ ಪ್ರದರ್ಶಿಸುವ ಖರ್ಚನ್ನು ಭರಿಸುತ್ತಿದ್ದರು. ಕೇಳಿಕೆ ಆಡುವ ಟೆಂಟನ್ನು ಹಾಕಲು ಪಾತ್ರ ಮಾಡುತ್ತಿದ್ದವರು ಕೂಡ ಹೋಗಿ ಕೆಲಸ ಮಾಡುತ್ತಿದ್ದರು. ನಾವು ಕೂಡ ಸಣ್ಣ ಪುಟ್ಟ ವಸ್ತುಗಳನ್ನು ಅವರಿಗೆ ಎತ್ತಿಕೊಡುತ್ತಾ ಸಹಾಯ ಮಾಡುತ್ತಿದ್ದೆವು. ಆ ದಿನ ಶಾಲೆ ಇದ್ದರೂ ಶಾಲೆಗೆ ಚಕ್ಕರ್ ಹೊಡೆಯುತ್ತಿದ್ದೆವು. ನಾವೇ ಕೇಳಿಕೆ ಮಾಡುತ್ತಿದ್ದೇವೇನೋ ಅನ್ನುವಂತೆ ಅದಕ್ಕಿಂತಲೂ ಹೆಚ್ಚಿನ ಖುಷಿ ನಮ್ಮದಾಗಿತ್ತು. ಬೂಸೆಪ್ಪನವರ ದೊಡ್ಡ ಬಯಲಿನಲ್ಲಿ ಕೇಳಿಕೆಯ ಸೆಟ್ಟನ್ನು ಹಾಕುತ್ತಿದ್ದರು. ಅದು ದೊಡ್ಡ ಬಯಲಾಗಿದ್ದರಿಂದ ಕೇಳಿಕೆ ಆಡಲು, ಆಡುವುದನ್ನು ನೋಡಲು ತುಂಬಾ ಚೆನ್ನಾಗಿತ್ತು. ಈ ಕೇಳಿಕೆ ಕುರಿತು ಸುತ್ತಮುತ್ತ ಊರಿನವರಿಗೆಲ್ಲಾ ಹಲಗೆ ಹೊಡೆಸಿ, ಪಾಂಪ್ಲೆಟ್ ಹೊಡೆಸಿ ಹಂಚಿ ತಿಳಿಸುತ್ತಿದ್ದರಿಂದ ಸುತ್ತಮುತ್ತ ಊರಿನವರೆಲ್ಲ ಕೇಳಿಕೆ ನೋಡಲು ಬರುತ್ತಿದ್ದರು. ಆಗ ಟಿವಿಗಳು ಎಲ್ಲರ ಮನೆಗಳಲ್ಲೂ ಇರಲಿಲ್ಲ. ಕೇಳಿಕೆಯು ಪ್ರಧಾನವಾದ ಮನರಂಜನೆಯ ಭಾಗವಾಗಿತ್ತು.

ಕೇಳಿಕೆ ನೋಡಲು ತುಂಬಾ ಹತ್ತಿರದಲ್ಲಿ ಟೆಂಟ್ ಮುಂದೆ ಜಾಗ ಹಿಡಿಯುವುದೇ ಆಗ ನಮ್ಮ ದೊಡ್ಡ ಸಾಹಸ ಆಗಿತ್ತು. ಸಂಜೆ ಆರು ಗಂಟೆಗೆಲ್ಲ ಚಾಪೆ, ಗೋಣಿಚೀಲ, ಹಳೆ ರಗ್ಗು ಇವುಗಳನ್ನು ಎತ್ತಿಕೊಂಡು ಹೋಗಿ ಕೇಳಿಕೆಯ ಟೆಂಟ್ ಮುಂದೆ ಹಾಸಿ ಎಲ್ಲರೂ ಜಾಗ ಹಿಡಿಯುತ್ತಿದ್ದೆವು. ಕೇಳಿಕೆ ಶುರುವಾಗುತ್ತಿದ್ದದ್ದು ರಾತ್ರಿ 9:30 – 10 ಗಂಟೆಗೆ. ಕೆಲವೊಮ್ಮೆ ಜಾಗ ಹಿಡಿಯುವುದರಲ್ಲಿ ಕಿತ್ತಾಟವೂ ಜೋರಾಗಿ ಇರುತ್ತಿತ್ತು. ನಾವು ಬಹಳ ಮುಂದೆ ಜಾಗ ಹಿಡಿಯಬೇಕೆಂದು ಸತತ ಪ್ರಯತ್ನದಲ್ಲಿ ಊಟ

ಮಾಡುವುದನ್ನೇ ಮರೆತು ಕೇಳಿಕೆ ಶುರುವಾದ ಸ್ವಲ್ಪ ಸಮಯದಲ್ಲಿ ನಿದ್ದೆ ಮಾಡಿ ಬಿಡುತ್ತಿದ್ದೆವು. ಇನ್ನು ಕೆಲವು ಕೇಳಿಕೆಗಳನ್ನು ಪೂರ್ತಿಯಾಗಿ ಖುಷಿಯಿಂದ ನೋಡುತ್ತಿದ್ದೆವು. ಕಿರೀಟ, ಗದೆ, ಥಳಥಳಿಸುವ ಬಟ್ಟೆ, ಉಂಗುರಗಳು, ಪೇಟ, ಎದೆಹಾರಗಳು, ಮುಖತುಂಬಾ ಗಾಢವಾದ ಬಣ್ಣ ಇವೆಲ್ಲವೂ ಹಾಕಿರುವುದರಿಂದ ನಮ್ಮವರೇ ನಮಗೆ ಅಲ್ಲಿ ಗುರುತು ಸಿಗುತ್ತಿರಲಿಲ್ಲ. ಚಂದ್ರಮತಿಯ ವೇಷ ಹಾಕಿದ್ದ ನಮ್ಮ ದೊಡ್ಡಣ್ಣ ನಾರಾಯಣಸ್ವಾಮಿ ನಮ್ಮ ಅಮ್ಮನ ಹತ್ತಿರ ಅವರ ಸೀರೆ ಬಳೆಗಳು ಇವುಗಳನ್ನು ತೆಗೆದುಕೊಂಡು ಹೋಗಿ ಚಂದ್ರಮತಿಯ ರೂಪದಲ್ಲಿ ತಯಾರಾಗುತ್ತಿದ್ದ. ಅವರು ಬಳಸುತ್ತಿದ್ದ ಗಾಢ ಬಣ್ಣದಲ್ಲಿ ನಮ್ಮ ಅಣ್ಣ ಗುರುತು ಸಿಗುತ್ತಿರಲಿಲ್ಲ. ಕೇಳಿಕೆ ಮಧ್ಯದಲ್ಲಿ ಬರುವ ಹಾಡುಗಳಿಗೆ ನೃತ್ಯ ಮಾಡಲು ಕೋಲಾರದಿಂದ ಹೆಣ್ಣು ಮಕ್ಕಳನ್ನು ಕರೆಸಿ ಕುಣಿಸುತ್ತಿದ್ದರು. ಹೆಣ್ಣುಮಕ್ಕಳು ಕುಣಿಯುತ್ತಿರುವಾಗ ಸಿಳ್ಳೆ ಕೇಕೆಗಳು ಜೋರಾಗಿರುತ್ತಿದ್ದವು. ಅವರು ಕುಣಿಯುವಾಗ ಜಗಮಗಿಸುವ ಲೈಟುಗಳನ್ನು ವಿಚಿತ್ರವಾಗಿ ಹಾಕುವುದು, ಹಾರಿಸುವುದು, ಬದಲಿಸುವುದು, ಬಣ್ಣ ಬದಲಿಸುವುದು ಮಾಡುತ್ತಿದ್ದರು. ಆ ಬೆಳಕಿನಲ್ಲಿ ನೃತ್ಯ ಮಾಡುತ್ತಿದ್ದ ಅವರು ಒಮ್ಮೆ ಮಾಯವಾಗಿ ಮತ್ತೊಮ್ಮೆ ಪ್ರತ್ಯಕ್ಷವಾಗಿ ಕಾಣುತ್ತಿದ್ದರು. ತುಂಬಾ ಮುಂದೆ ಕೂತ ನಮಗೆ ಆ ಬೆಳಕಿನ ಕಿರಣಗಳು ಕಣ್ಣಿಗೆ ತಾಗಿ ಕಣ್ಣುಗಳು ಮಂಜಿನಂತೆ ಆಗುತ್ತಿದ್ದವು. ನಾರದ ಬರುವಾಗ ಮೋಡಗಳಲ್ಲಿ ತೇಲಿಕೊಂಡು ಮೇಲಿನಿಂದ ಬರುತ್ತಿದ್ದ, ಮೇಲಿನಿಂದ ದಾರ ಕಟ್ಟಿರುವುದೇನು ನಮಗೆ ಕಾಣಿಸುತ್ತಿರಲಿಲ್ಲ. ದಟ್ಟ ಹೊಗೆ ಇಡೀ ರಂಗಸ್ಥಳವನ್ನು ಆವರಿಸಿಕೊಳ್ಳುತ್ತಿತ್ತು. ಆಗೆಲ್ಲ ನಮಗೆ ತುಂಬಾ ಆಶ್ಚರ್ಯವಾಗುತ್ತಿತ್ತು, ನಾರದ ಹೀಗೆ ಹಾರಿಕೊಂಡು ಬರುವುದು ಹೇಗೆ ಎಂದು ತುಂಬಾ ಕುತೂಹಲವಾಗುತ್ತಿತ್ತು. ಭಕ್ತ ಪ್ರಹ್ಲಾದ ಕೇಳಿಕೆಯನ್ನು ನೋಡುತ್ತಾ ನೋಡುತ್ತಾ ಭಕ್ತ ಪ್ರಹ್ಲಾದನಿಗೆ ಕೊಡುತ್ತಿದ್ದ ಕಷ್ಟಗಳನ್ನು ನೋಡಿ ತುಂಬಾ ಅಳುತ್ತಿದ್ದೆ. ಅತ್ತು ಅತ್ತು ನಿದ್ದೆಯೂ ಮಾಡಿದ್ದೆ. ಕೊನೆಗೆ ಬೆಳಗಾಗುವ ಹೊತ್ತಿಗೆ ಕಂಬದಿಂದ ದಿಡೀರನೆ ಒಡೆದು ಬಂದ ನರಸಿಂಹ ಹಿರಣ್ಯಕಶಿಪುವಿನ ಮೇಲೆ ಎರಗಿ ಕಿರುಚಿದ್ದರಿಂದ ಹೆದರಿ ನಿದ್ದೆಯಿಂದ ಎದ್ದು ಕುಳಿತು ಪಿಳಿ ಪಿಳಿ ಕಣ್ಣು ಬಿಟ್ಟು ನೋಡಿ ಅಲ್ಲಾಡಿ ಹೋಗಿದ್ದು ಈಗಲೂ ಚೆನ್ನಾಗಿ ನೆನಪಿದೆ. ನಲ್ಲ ತಂಗಿ, ಸಾಸಲೂರು ಚೆನ್ನಮ್ಮ, ಬಾಲನಾಗಮ್ಮ ಕೇಳಿಕೆಗಳನ್ನು ನೋಡಿ ಹೆಣ್ಣುಮಕ್ಕಳಂತೂ ತುಂಬಾ ಅಳುತ್ತಿದ್ದರು. ಕೇಳಿಕೆ ಮುಗಿದ ಕೊನೆಯಲ್ಲಿ ಮಹಾಮಂಗಳಾರತಿ ಮಾಡುತ್ತಿದ್ದರು. ಎಲ್ಲರಿಗೂ ಕಡ್ಲೆ ಪಪ್ಪು, ಬೆಲ್ಲ, ಕೊಬ್ಬರಿ ಇವುಗಳನ್ನು ಪುಡಿಮಾಡಿದ ಪ್ರಸಾದವನ್ನು ಎಲ್ಲರಿಗೂ ಕೊಡುತ್ತಿದ್ದರು. ಇದು ತಿನ್ನಲು ತುಂಬಾ ಚೆನ್ನಾಗಿರುತ್ತಿತ್ತು.

ಕೇಳಿಕೆ ಕಥಾ ರೂಪವನ್ನು ವಿಸ್ತರಿಸುವ, ಸಂಭಾಷಣೆಯನ್ನು ಕ್ರಿಯಾಶೀಲವಾಗಿ ಕಟ್ಟಿಕೊಡುವ, ಪಾತ್ರವನ್ನು ಮನೋಜ್ಞವಾಗಿ ಅಭಿನಯಿಸುವ ರೀತಿಗಳಲ್ಲಿ ಕೇಳಿಕೆಯ ಮೇಷ್ಟ್ರುಗಳ ಸೃಜನಶೀಲತೆ ತುಂಬಾ ಮಹತ್ವದ್ದಾಗಿ ಕಾಣುತ್ತಿತ್ತು. ಇವುಗಳು ಅವರ ವಿದ್ವತ್ತನ್ನು ತೋರಿಸುತ್ತಿದ್ದವು. ಹಾಗೆಯೇ ಪಾತ್ರ ಮಾಡದೇ ಇರುವ, ಮಾಡಲು ಆಸೆ ಇರುವ ಸಾಮಾನ್ಯರಿಗೂ ಕೂಡ ಕೇಳಿಕೆಯ ಘಮಲನ್ನು ಆಸ್ವಾದಿಸುವ, ಅದರ

ಗಮ್ಮತ್ತನ್ನು ಉಣಬಡಿಸುವ ನೆಲೆಯಲ್ಲಿ ಕೇಳಿಕೆಯ ಪಾತ್ರ ತುಂಬಾ ಮಹತ್ವದ್ದಾಗಿತ್ತು.

ನಾಟಕ ಮುಗಿದರೂ ಅದರ ಹವಾ ತುಂಬಾ ದಿನಗಳವರೆಗೆ ಊರಿನಲ್ಲಿ ಇರುತ್ತಿತ್ತು. ಕೇಳಿಕೆಯ ಪಾತ್ರಗಳ ಹೆಸರುಗಳಿಂದಲೇ ವ್ಯಕ್ತಿಗಳನ್ನು ಗುರುತಿಸುತ್ತಿದ್ದರು. ಬಸಪ್ಪನವರ ಕೃಷ್ಣಪ್ಪನನ್ನು ಈಗಲೂ ಶಕುನಿ ಕೃಷ್ಣಪ್ಪ ಎಂದು ಕರೆಯುತ್ತಾರೆ. ಅವರು ಕುರುಕ್ಷೇತ್ರದಲ್ಲಿ ಬಹಳ ಚೆನ್ನಾಗಿ ಶಕುನಿ ಪಾತ್ರ ಮಾಡುತ್ತಿದ್ದರು. ಎಲ್ಲರ ಸಹಭಾಗಿತ್ವ, ಕಲಿಕೆ, ಮನೋರಂಜನೆ ತುಂಬಾ ಖುಷಿ ಕೊಡುತ್ತಿತ್ತು. ಆ ಕೊಡುಕೊಳ್ಳುವಿಕೆಯ ಸಂಬಂಧಗಳು ಹೆಚ್ಚು ಬೆಳೆಯಲು ಇಂತಹ ಜನಪದ ಕಲಾಪ್ರಕಾರಗಳು ಸಹಾಯಕವಾಗುತ್ತಿದ್ದವು. ಅವುಗಳೆಲ್ಲಾ ಈಗ ಸುಂದರ ನೆನಪುಗಳಾಗಿ ಮನಃಪಟಲದಲ್ಲಿ ಉಳಿದಿವೆ.

ಕೇಳಿಕೆ ಹಾಗೆಂದರೇನು? ಇದೊಂದು ಜನಪದ ನಾಟಕ ಪ್ರಕಾರವಾದರೂ ಬಯಲಾಟ, ಯಕ್ಷಗಾನಕ್ಕಿಂತ ಭಿನ್ನವಾದ 'ಕೇಳಿಕೆ' ಎಂಬ ಹೆಸರು ಹೇಗೆ ಬಂತು? ಇದರ ಮೂಲ ಹೇಗಿತ್ತು? ಅದು ತದನಂತರದಲ್ಲಿ ಪಡೆದುಕೊಂಡ ರೂಪಗಳು ಎಂತಹವು? ಎಂಬ ವಿಚಾರಗಳಿಗೆ ಸಂಬಂಧಿಸಿದಂತೆ, ಇವುಗಳು ಹೆಚ್ಚು ಪ್ರದರ್ಶನಗೊಳ್ಳುವ ಪ್ರದೇಶಗಳಿಗೆ ಸಂಬಂಧಿಸಿದಂತೆ ಹಲವು ವಿದ್ವಾಂಸರು ತಮ್ಮದೇ ಆದ ಶೋಧನೆಗಳ ದಾರಿಯಲ್ಲಿ ತಮ್ಮದೇ ಆದ ತಿಳಿವುಗಳನ್ನು ಮಂಡಿಸಿದ್ದಾರೆ.

ಹೆಚ್ಚಿನ ವಿದ್ವಾಂಸರು ಕೇಳಿಕೆ ಹೆಚ್ಚು ಪ್ರದರ್ಶನಗೊಳ್ಳುವ ಪ್ರದೇಶ, ಭಾಷೆಯ ನೆಲೆಯಲ್ಲಿ ಅದರ ಇತಿಹಾಸವನ್ನು ಗುರುತಿಸುತ್ತಾರೆ. ಕೇಳಿಕೆ ಪ್ರಕಾರವು ಗರಿಷ್ಟ ಪ್ರಮಾಣದಲ್ಲಿ ತೆಲುಗು ಭಾಷೆಯಲ್ಲಿ ಪ್ರದರ್ಶನಗೊಳ್ಳುತ್ತದಾದ್ದರಿಂದ ಹಾಗೂ ಇದು ಕರ್ನಾಟಕ ಹಾಗೂ ಆಂಧ್ರದ ಗಡಿನಾಡ ಪ್ರದೇಶದಲ್ಲಿ ಮಾತ್ರ ಪ್ರದರ್ಶನಗೊಳ್ಳುವ ಕಲಾ ಪ್ರಕಾರವಾಗಿರುವುದರಿಂದ ಇದರ ಮೂಲ ಆಂಧ್ರ ಎಂದು ಹೇಳುತ್ತಾರೆ. ಕರ್ನಾಟಕದಲ್ಲಿರುವಂತೆ ಆಂಧ್ರದಲ್ಲಿಯೂ ಯಕ್ಷಗಾನ ಪ್ರಕಾರವು ಬ್ರಾಹ್ಮಣ ಸಮುದಾಯಗಳಿಂದ ಪ್ರದರ್ಶನಗೊಳ್ಳುತ್ತದೆ, ಹಾಗೆಯೇ ಕೃಷಿಕ ಸಮುದಾಯಗಳಿಂದ ಗಡಿಭಾಗದಲ್ಲಿ ಕೇಳಿಕೆ ಪ್ರಕಾರವು ಪ್ರದರ್ಶನವಾಗುತ್ತದೆ...... ಆಂಧ್ರದಲ್ಲಿಯೂ ಈ ಕಲೆ ಇದ್ದರೂ ಕರ್ನಾಟಕದ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಕೇಳಿಕೆ ಹೆಚ್ಚಾಗಿ ಕಂಡು ಬರುತ್ತದೆ.

ದಕ್ಷಿಣ ಭಾರತದ ಭಾಷೆಗಳೆಲ್ಲವುಗಳ ಮೂಲ ಬೇರು ದ್ರಾವಿಡ ಭಾಷೆ ಒಂದೇ ಆಗಿರುವುದರಿಂದ ಭಾಷೆಯ ಎಳೆಗಳು ಒಂದೇ ರೀತಿಯ ಧ್ವನಿಯಲ್ಲಿ, ಅರ್ಥದಲ್ಲಿ, ಅದರಲ್ಲೂ ಸ್ವಲ್ಪವೇ ಬದಲಾವಣೆಯಿಂದ ಎರಡೂ ರಾಜ್ಯಗಳಲ್ಲಿ ಅಭಿವ್ಯಕ್ತಿಗೊಂಡಿರುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

'ಕೇಳಿಕೆ' ಕನ್ನಡ ಶಬ್ದ. ಕೇಳಿಕೆ ಕೇಳುವಿಕೆಯಿಂದ ಬಂದಿದೆ. ಕೇಳುವಿಕೆ > ಕೇಳಿಕೆ ಆಗಿದೆ. ಕೃಷಿ ಸಮುದಾಯಗಳಲ್ಲಿ ಹುಟ್ಟಿಕೊಂಡ ಈ ಪ್ರಕಾರವು ಮೂಲದಲ್ಲಿ ಹರಿಕಥೆ ರೂಪದಲ್ಲಿ ಇತ್ತು. ಕೃಷಿಕ ಸಮುದಾಯಗಳ ಜನಮಾನಸದಲ್ಲಿ ಪುರಾಣಗಳು

ರೂಪವನ್ನು ಪಡೆಯುತ್ತಿದ್ದಾಗ ಅವರು ಅದನ್ನು ಪ್ರದರ್ಶಿಸಲು ರಂಗಸಜ್ಜಿಕೆ ಇರಲಿಲ್ಲ. ಅವುಗಳನ್ನು ಕಥೆಯ ರೂಪದಲ್ಲಿಯೂ ಹರಿಕಥೆ ರೂಪದಲ್ಲಿಯೂ ಹಾಡುತ್ತಿದ್ದರು. ಅವುಗಳನ್ನು ಜನ ಕೇಳಿಸಿಕೊಳ್ಳುತ್ತಿದ್ದರು. ಆದ್ದರಿಂದಲೇ ಈ ಪ್ರಕಾರಕ್ಕೆ ಕೇಳಿಕೆ ಎಂಬ ಹೆಸರು ಬಂದಿರಬೇಕು. ತದನಂತರದ ದಿನಗಳಲ್ಲಿ ಈ ಕಥಾ ಪ್ರಕಾರಕ್ಕೆ ರಂಗ ಸಜ್ಜಿಕೆ, ವೇಷಭೂಷಣಗಳು ಬಂದು ಪ್ರದರ್ಶನಗೊಳ್ಳಲು ಪ್ರಾರಂಭಿಸಿದ ಮೇಲೂ 'ಕೇಳಿಕೆ' ಹೆಸರೇ ಉಳಿದುಕೊಂಡಿರಬಹುದು.

'ಕೇಳ' ಎಂದರೆ ಕೋಲಾರದ ಪ್ರಾದೇಶಿಕ ಕನ್ನಡ ಅರ್ಥದಲ್ಲಿ ಮತ್ತೊಬ್ಬರನ್ನು ಕೇಳು, ಕೇಳಿಸಿಕೋ, ಎಂಬ ಅರ್ಥ ಇದೆ. ಕೇಳಿಕೆ ಎಂದರೆ ನಾಟಕ ಎಂದರ್ಥವಿದೆ.

ಕನ್ನಡದಲ್ಲಿ 'ಕೇಳಿಕೆ' ಮತ್ತು ಇದಕ್ಕೆ ಹತ್ತಿರವಿರುವ ಪದಗಳಿಗೆ ಸಂಬಂಧಿಸಿದಂತೆ ಕನ್ನಡದ ನಿಘಂಟುಗಳು ಹೀಗೆ ಹೇಳುತ್ತವೆ:

ಕೇಳ- ನರ್ತಕ

ಕೇಳಿಕೆ- ಆಟ

ಕೇಳಿಕೆವಿಡಿ- ನೃತ್ಯ ಮಾಡು

ಕೇಳಿನಿವಾಸ- ನೃತ್ಯ ಮಂದಿರ

ಕೇಳಲೀಲೆ- ಶೃಂಗಾರಲೀಲೆ

ಕೇಳೀಶೀಲ- ಆಟವೇ ಶೀಲವಾಗಿರುವವನು/ಳು

ಕೇಳಿಸು- ಕೇಳುವಂತೆ ಮಾಡು

ಕೇಳಿಸು- ವಾದ್ಯ ನುಡಿಸು

ಕೇಳಿದೋಹಳ- ಆಟದ ಬಯಕೆ ಉಳ್ಳವನು

ಕೇಳೀವನ- ಆಟಕ್ಕಾಗಿ ಇರುವ ಉದ್ಯಾನ

ಹಳಗನ್ನಡ ಕಾವ್ಯಗಳೂ ಕೂಡ ಕೇಳ, ಕೇಳಿಕೆ, ಕೇಳಿಕೆವಿಡಿ, ಕೇಳಿನಿವಾಸ, ಕೇಳಿಶೀಲ, ಕೇಳಿಸು, ಕೇಳಿದೋಹಳ, ಕೇಳೀವನ ಎಂಬ ಪದಗಳನ್ನು ಈ ರೀತಿಯಾಗಿ ಬಳಸಿವೆ:

'ಶರದದ ಗೊಟ್ಟಿಗಾಯಕರ ಕೇಳರ ಕೇರಿಯೊಳಿಂದು ಕಾಂತಾಮಂದಿರದೊಳಗಿರ್ದು' (ಆದಿ ಪುರಾಣ)

'ಸಹಜ ಚಲ್ವಿನೊಳ್ ರತಿಯ ಸೋಲದ ಕೇಳಿಕೆಯೊಳ್ ಪೊದಳ್ದು ಸನ್ನಿಹಿತವೆನಿಪ್ಪ ಅಪೂರ್ವಶುಭಲಕ್ಷಣದೇಹದೊಳ್' (ಪಂಪಭಾರತ)

'ಸಾರಸಂಗೀತಮಂ ಕೇಳಿಪ ಕೇಳಿಕೆ ವಿಡಿದ ಭಾರತಿಯಿಂ' (ಶಬರಶಂಕರ

ಚರಿತ)

‘ಕೇಳಿನಿವಾಸದಲಿ ನರ್ತನ ಮನೊಡರ್ಚೆ’ (ಚಂದ್ರಪ್ರಭ ಪುರಾಣ)

‘ಕವಿಕುಳ ಸೇವ್ಯಮಾನ ಕವಿತಾಳ ಹಂಸೆಗೆ ಕೇಳಲೀಲೆ’ (ಚಂದ್ರಪ್ರಭ ಪುರಾಣ)

‘ಪಾಂಡವರನಿಕ್ಕಿದ ಒಸಗೆ ಮಾತುಗಳು ಈಗಲ್ ಕೇಳಿಸುವೆಂ’ (ಪಂಪಭಾರತ)

‘ಜಾಣೆ ಬೀಣೆಯಂ ಕೇಳಿಸುವಳ್’ (ಗಿರಿಜಾ ಕಲ್ಯಾಣ)

‘ಸುಭಟ ಸಂಘಟ್ಟದೋರ್ಗರ್ವವಿದ್ವಂಸಕಕೇಳೀದೋಹಳ’ (ಆದಿಪುರಾಣ)

‘ಪ್ರಿಯವಾದುವು ಪಡಿಯರವಕ್ಕಿಯ ಜಡಿಪುಂ ಜಕ್ಕವಕ್ಕಿಯಲಿ ಸಾರಸವಕ್ಕಿಯಕುಹಕಂ ಪಂಡಿತ ವಕ್ಕಿಯಪಠನಂ ನೃಪನ ಕಿವಿಗೆ ಕೇಳೀವನದೊಳ್’ (ಮಲ್ಲಿನಾಥ ಪುರಾಣ)

ಇವುಗಳೆಲ್ಲವುಗಳ ಹಿನ್ನೆಲೆಯಲ್ಲಿ ಗಮನಿಸಿದರೆ ಕೇಳಿಕೆ ಕನ್ನಡದ್ದೇ ಪದ ಎಂಬುದು ಇನ್ನಷ್ಟು ದೃಢವಾಗುತ್ತದೆ.

ಜಾನಪದವನ್ನು ಕುರಿತು ಮೊದಲಿನಿಂದಲೂ ಪುರುಷ ಲೇಖಕರೇ ಜಾನಪದದ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದರಿಂದ ಗಂಡಿನ ನೋಟದ ಹಿನ್ನೆಲೆಯಲ್ಲಿ ಆಯಾ ಪ್ರಕಾರಗಳನ್ನು ಅವರು ನೋಡಿದ್ದಾರೆ ಹಾಗೂ ವಿಶ್ಲೇಷಿಸಿದ್ದಾರೆ. ಕೇಳಿಕೆ ಕಲಾ ಪ್ರಕಾರದಲ್ಲಿರುವ ಜಾತಿ ತಾರತಮ್ಯ, ಲಿಂಗ ತಾರತಮ್ಯ ಇವುಗಳ ಕುರಿತು ನಾವು ಹೇಗೆ ನೋಡುತ್ತೇವೆ ಮತ್ತು ಮಾತನಾಡುತ್ತೇವೆ ಎಂಬುದು ಕೂಡ ಇಲ್ಲಿ ಮುಖ್ಯವಾಗುತ್ತದೆ. ಈ ಕುರಿತು ಹೆಚ್ಚಿನ ಅಧ್ಯಯನಗಳು ನಡೆಯಬೇಕಾಗಿದೆ. ಕೇಳಿಕೆ ಪ್ರಕಾರದಲ್ಲಿ ಹಳ್ಳಿಯ ಮಹಿಳೆಯರ ಪಾತ್ರ ಇರಲಿಲ್ಲ ಏಕೆ ಎಂದು ನೋಡಿದಾಗ ಇದರ ಹಿಂದಿನ ಪುರುಷಾಧಿಪತ್ಯದ ಕರಾಳ ನಿಷ್ಠುರ ನಡೆ ನಮಗೆ ಗಾಢವಾಗಿ ಕಾಣಿಸುತ್ತದೆ. ಕೇಳಿಕೆಯ ನೃತ್ಯಕ್ಕೆ ಮಾತ್ರ ನಗರದಿಂದ ಹೆಣ್ಣು ಮಕ್ಕಳನ್ನು ಕರೆದುಕೊಂಡು ಬಂದು ನೃತ್ಯ ಮಾಡಿಸುತ್ತಾರೆ. (ಆದರೆ ಇದಕ್ಕೆ ವಿರುದ್ಧವಾಗಿ ಉತ್ತರ ಕರ್ನಾಟಕದಲ್ಲಿ ದೇವದಾಸಿ ಮಹಿಳೆಯರ ದೊಡ್ಡ ದಂಡೇ ಬಯಲಾಟಗಳಲ್ಲಿ ಅಭಿನಯಿಸಿದ್ದಾರೆ. ಉತ್ತರ ಕರ್ನಾಟಕದ ಬಯಲಾಟಗಳು ಮತ್ತು ದೇವದಾಸಿ ಮಹಿಳೆಯರಿಗಿರುವ ನಂಟಿನ ಕುರಿತು ಅಧ್ಯಯನದ ಅಗತ್ಯವಿದೆ.)

ಊರಿಗೆ ಟಿವಿ, ಕೇಬಲ್, ವಿಸಿಪಿ ಗಳು ಪ್ರವೇಶ ಆದಂತೆಲ್ಲಾ ಕೇಳಿಕೆ ಪ್ರದರ್ಶನಗಳು ಕಡಿಮೆಯಾದವು. ಅವುಗಳ ಕುರಿತು ಮಾತನಾಡುವುದು ಕೂಡ ಕಡಿಮೆಯಾಯಿತು. ಅಪರೂಪಕ್ಕೆಂಬಂತೆ ಈಗಲೂ ಕೇಳಿಕೆಗಳು ನಡೆಯುತ್ತವೆ. ಆದರೆ ಅಲ್ಲಿ ಮೊದಲಿದ್ದಂತಹ ಲವಲವಿಕೆಗಳು ಕಾಣೆಯಾಗಿವೆ. ಕೇಳಿಕೆಗಳು ನಡೆದರೂ ಕೃಪಾಪೋಷಿತ ನಾಟಕ ಮಂಡಳಿಗಳಿಂದ, ಸಹಕಾರದಿಂದ ಕೆಲವೊಮ್ಮೆ ನಡೆಯುವುದುಂಟು. ಅವು ಅಪರೂಪ. ತಿಥಿಗಳಿಗೆ ಅಲೆಮಾರಿ ಸಮುದಾಯಗಳನ್ನು ಕರೆಸಿ ಕೇಳಿಕೆ ಆಡಿಸುತ್ತಾರೆ. ಅವುಗಳಲ್ಲಿ ಎರಡರ್ಥದ ಸಂಭಾಷಣೆಗಳೇ ಹೆಚ್ಚು.

ಸಿನಿಮಾ ಗೀತೆಗಳು ಅದಕ್ಕೆ ತಕ್ಕಂತೆ ನೃತ್ಯಗಳು ಹೆಚ್ಚಾಗಿವೆ.

ಜನಜೀವನದ ವಿಧಾನಗಳು ಬದಲಾದಂತೆಲ್ಲಾ ನಮ್ಮ ನಡುವಿರುವ ಕಲಾ ಪ್ರಕಾರಗಳೂ ಕೂಡ ಬದಲಾಗುತ್ತಿರುತ್ತವೆ. ಕಲೆ ನಶಿಸುತ್ತಿದೆ ಎಂದು ಮಾತನಾಡುವ ಬದಲಿಗೆ ಕಲೆ ಪಡೆಯುತ್ತಿರುವ ಮತ್ತೊಂದು ಸ್ವರೂಪವನ್ನು ನಮ್ಮ ಬದುಕಿಗೆ ಆಪ್ತವಾಗುವ ಹಾಗೆ ಮಾರ್ಪಡಿಸಿ ಅಪ್ಪಿಕೊಳ್ಳುವ ಕ್ರಮದಲ್ಲಿ ಅದನ್ನು ನೋಡುವ, ಸ್ವೀಕರಿಸುವ ನೋಟ ನಮ್ಮದಾದರೆ ಆಗ ನಮ್ಮ ಸಾಂಸ್ಕೃತಿಕ ಬದುಕಿನ ನಡೆಯನ್ನು ಆರೋಗ್ಯಪೂರ್ಣವಾಗಿ ವಿಸ್ತರಿಸಬಹುದು.

ಪರಾಮರ್ಶನ ಗ್ರಂಥಗಳು:

1. ಬೋರಲಿಂಗಯ್ಯ ಹಿ.ಚಿ., (2002), ಕರ್ನಾಟಕ ಜಾನಪದ ಕಲೆಗಳ ಕೋಶ, ಹಂಪಿ: ಕನ್ನಡ ವಿಶ್ವವಿದ್ಯಾಲಯ.
2. ನಿಂಗಣ್ಣ ವಿ.ಸಿ., (2019), ಜಾನಪದ ದರ್ಪಣ, ಕಲಬುರ್ಗಿ: ಕನ್ನಡ ನಾಡು ಲೇಖಕರ ಮತ್ತು ಓದುಗರ ಸಹಕಾರ ಸಂಘ.
3. ಶಿವರಾಮು ವ. ನಂ., (2023), ಜಾನಪದ– ಜಾನಪದ, ಜಾನಪದ ಅಧ್ಯಯನ ಮತ್ತು ಕ್ಷೇತ್ರ ಕಾರ್ಯ, ಬೆಂಗಳೂರು: ಪ್ರಗತಿ ಗ್ರಾಫಿಕ್ಸ್.
4. ಶಿವರಾಮ ಕಾರಂತ, (2019), ಕರ್ನಾಟಕ ಜಾನಪದ ಕಲೆಗಳು, ಬೆಂಗಳೂರು: ಸ್ವಪ್ನ ಬುಕ್ ಹೌಸ್.

Funding:

This study was not funded by any grant.

Conflict of interest:

The Authors have no conflict of interest to declare that they are relevant to the content of this article.

About the License:

© The Authors 2024. The text of this article is open access and licensed under a Creative Commons Attribution 4.0 International License.